**ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು ಅದಕ್ಕೆ ಪೌಲನು ಯೋಹಾನನು ದೇವರ ಕಡೆಗೆ ತಿರುಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬುದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು. ಅವರು ಸುಮಾರು ಹನ್ನೆರಡು ಮಂದಿ ಗಂಡಸರು**

"ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ"? ಎಂಬ ಪ್ರಶ್ನೆಯೊಂದಿಗೆ ಪೌಲನು ಪ್ರಾರಂಭಿಸುವುದನ್ನು ಪರಿಗಣಿಸುವುದು ಬಹಳ ಆಸಕ್ತಿಕರವಾಗಿದೆ. ಇಂತಹ ಜನರಿಗಾಗಿ ಅಪೊಸ್ತಲರ ಕೃತ್ಯಗಳು 19ರಲ್ಲಿ ಪೌಲನು ಮಾಡಿದಂತೆ ಯೇಸುಕ್ರಿಸ್ತನನ್ನು ನಂಬಿದಂತಹ ಹೊಸ ವಿಶ್ವಾಸಿಗಳು ಪವಿತ್ರಾತ್ಮನನ್ನು ಪಡೆದುಕೊಳ್ಳಲೂ ಪ್ರಾರ್ಥಿಸುವಂತದ್ದನ್ನು ಎದುರು ನೋಡುವಂತದ್ದು ಸಾಮಾನ್ಯವಾದುದೆಂಬುದಾಗಿ ತಿರುಗಿ ತಿಳಿಯಪಡಿಸಲ್ಪಟ್ಟಿತು. ಪೌಲನು ಅವರಿಗೆ ಯೇಸುಕ್ರಿಸ್ತನ ಕುರಿತು ಪ್ರಸಂಗಿಸಿದನು. ನೀರಿನಿಂದ ಅವರಿಗೆ ದೀಕ್ಷಾಸ್ನಾನ ಮಾಡಿಸಿದನು. ಪವಿತ್ರಾತ್ಮನಿಂದ ದೀಕ್ಷಾಸ್ನಾನ ಹೊಂದಿಕೊಳ್ಳುವಂತಹದ್ದಾಗಿದ್ದ ಪವಿತ್ರಾತ್ಮನನ್ನು ಪಡೆದುಕೊಳ್ಳಲು ಅವರು ಪ್ರಾರ್ಥಿಸುವ ಕಡೆಗೆ ಮುಂದುವರೆಯಿತು. ಪುನಃ ಮತ್ತೊಮ್ಮೆ, ಹಿಂದೆ ಜರುಗಿದಂತೆ, ಪವಿತ್ರಾತ್ಮನ ಸುರಿಸುವಿಕೆ ಅಥವಾ ಅನ್ಯಭಾಷೆಗಳಲ್ಲಿ ಪ್ರಾರ್ಥಿಸುವದುದರ ಅಪ್ರಾಕೃತ ತೋರ್ಪಡಿಸುವಿಕೆಗಳಿಂದ ಜೊತೆಗೂಡಿದಂತ ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನವಾದದ್ದನ್ನು ನಾವು ಗಮನಿಸಬಹುದಾಗಿದೆ ಮತ್ತು ಈ ಒಂದು ನಿದರ್ಶನದಲ್ಲಿ ಅವರು ಸಹ ಪ್ರವಾದಿಸಿದರು.

## ಐದು ದಾಖಲಿತ ನಿದರ್ಶನಗಳ ಸಾರಾಂಶ

ದಾಖಲಿಸ್ಪಟ್ಟಂತಹ ಐದು ನಿದರ್ಶನಗಳ ಮೂರರಲ್ಲಿ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿದ ಜನರು ಅನ್ಯಭಾಷೆಗಳಲ್ಲಿ ಮಾತಾನಾಡಿದರು ಎಂಬುದು ಸ್ಪಷ್ಟವಾಗಿದೆ. ಇತರೆ ಎರಡು ನಿದರ್ಶನಗಳಲ್ಲಿ ಸಮಾರ್ಯದಲ್ಲಿ ಅತ್ಯದ್ಭುತಕರವಾದುದು ಜರುಗಿತೆಂದು ನಾವು ಊಹಿಸಿಕೊಳ್ಳುತ್ತೇವೆ. ಆಮೇಲೆ ಸೌಲನ ನಿದರ್ಶನದಲ್ಲಿ ಅವನು ಅನ್ಯಭಾಷೆಯೊಡನೆ

**1 ಕೊರಿಂಥದವರಿಗೆ 14:2**
**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ. ಹೊರತು ಮನುಷ್ಯರ ಸಂಗಡ ಆಡುವದಿಲ್ಲ ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ**

ವಚನಭಾಗಗಳಲ್ಲಿ ನೋಡಿದಂತೆ ಅನ್ಯಭಾಷೆಯಲ್ಲಿ ಪ್ರಾರ್ಥಿಸುವುದು ಮಾತಾಡುವುದರ ಉಪಯೋಗದಲ್ಲಿ ವಿವಿಧತೆ ಇರುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇವುಗಳು ಸೇರಿವೆ:

ಅ) ವೈಯಕ್ತಿಕ ಪ್ರಾರ್ಥನೆ, ಮಧ್ಯಸ್ಥಿಕೆ ಮತ್ತು ಆತ್ಮೋನ್ನತಿಗಾಗಿ ಅನ್ಯಭಾಷೆಗಳು: ಇದು ಸಾಮಾನ್ಯವಾಗಿ ಅನ್ಯಭಾಷೆಯಲ್ಲಿ ಮಾತಾಡುವಂತಹದ್ದು ಸಾಮಾನ್ಯವಾಗಿರುವಂತದ್ದು, ಇದು ಆಂತರ್ಯ ಮನುಷ್ಯನ ಆತ್ಮೋನ್ನತಿ, ದೇವರೊಂದಿಗೆ ನೇರವಾಗಿ ಸಂಪರ್ಕ ಹೊಂದುವುದು ಮತ್ತು ಇತರಿಗಾಗಿ ಮಧ್ಯಸ್ಥಿಕೆ  ಪ್ರಾರ್ಥನೆ ಮಾಡುವುದು ಮುಂತಾದ ಫಲಿತಾಂಶದೊಡನೆ ಕೂಡಿರುವ ಅನ್ಯಭಾಷೆಯಲ್ಲಿ ವಿಶ್ವಾಸಿಗಳು ಪ್ರಾರ್ಥಿಸುವ/ಮಾತಾನಾಡುವಂತಹದಾಗಿದೆ (1 ಕೊರಿಂಥದವರಿಗೆ 14:2,4; ರೋಮಾಪುರದವರಿಗೆ 8:26–27)

ಆ) ಅರ್ಥ ವಿವರಣೆಗಾಗಿ ಅನ್ಯಭಾಷೆಗಳು: ಯಾವಾಗ ವಿಶ್ವಾಸಿಗಳು ಸೇರಿಬಂದಾಗ ಅನ್ಯಭಾಷೆಯಲ್ಲಿ ಒಂದು ಸಂದೇಶ ಕೊಡಲೂ ಒಬ್ಬ ವಿಶ್ವಾಸಿಯು ನಡೆಸಲ್ಪಟ್ಟರೆ, ಅದು ಅರ್ಥವಿವರಣೆಯೊಂದಿಗೆ ಮುಂದುವರೆಯಬೇಕು, ಆದ್ದರಿಂದ ಉಪಸ್ಥಿತರಿರುವರೆಲ್ಲರೂ ಅರ್ಥಮಾಡಿಕೊಳ್ಳಬಹುದು ಮತ್ತು ಆತ್ಮೋನ್ನತಿ ಹೊಂದಬಹುದು (1 ಕೊರಿಂಥದವರಿಗೆ 14:5,13)

ಇ) ಅವಿಶ್ವಾಸಿಗಳಿಗೆ ಅನ್ಯಭಾಷೆಗಳು ಒಂದು ಸೂಚನೆಯಾಗಿದೆ.: ಕರ್ತನ ಬಗ್ಗೆ ಸತ್ಯಗಳನ್ನು ಅವಿಶ್ವಾಸಿಗಳು ಕೇಳುವಂತಹ ಫಲಿತಾಂಶದೊಡನೆ, ಉಪಸ್ಥಿತರಿರುವ ಅವಿಶ್ವಾಸಿಗಳಿಂದ ವಿಶ್ವಾಸಿಗಳು ಆತ್ಮನಿಂದ ಮಾತಾನಾಡಿದಾಗ ಅರ್ಥಮಾಡಿಕೊಂಡಂತಹ ಒಂದು ಭಾಷೆ ಇದಾಗಿದೆ. (1 ಕೊರಿಂಥದವರಿಗೆ 14:22 ಅಪೊಸ್ತಲರ ಕೃತ್ಯಗಳು 2:7–11)

ಈ ಪ್ರಶ್ನೆಗೆ ಉತ್ತರ 'ಇಲ್ಲ' ಎಂಬುದಾಗಿ, ಅನ್ಯಭಾಷೆಗಳು ಯಾವಾಗಲೂ ಅರ್ಥವಾಗಬೇಕೆಂಬುದಾಗಿ ಎಂಬುದಾಗಿಲ್ಲ.

